



**ಗುಂಡಿ:** (ಪೊಲೀಸ್ ಸ್ಟೇಷನ್‌ಗೆ ಕರೆಮಾಡಿ) ಹಲೊ, ಜಯನಗರ ಪೊಲೀಸ್ ಸ್ಟೇಷನ್ನಾ ಇದು?
**ಪೊಲೀಸ್:** ಹೌದು.
**ಗುಂಡಿ:** ಸರ್ಕಲ್‌ನಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ವರ್ಕ್ ಆಗ್ತಾ ಇದ್ಯಾ?
**ಪೊಲೀಸ್:** ಹೌದು.
**ಗುಂಡಿ:** ಹಾಗಾದ್ರೆ ಸರ್ಕಲ್ ಕಾರ್ನರ್‌ನಲ್ಲಿ ಪಾನಿಪುರಿ ಅಂಗಡಿ ಓಪನ್ ಆಗಿದ್ಯಾ ಇಲ್ವಾ ಅಂತ ನೋಡ್ಬಿಟ್ಟು ಹೇಳ್ತಿರಾ ಒಂಚೂರು!

***

**ಗುಂಡಿ:** ಮನು ಹಳೆದೊಂದ್ ಕವನ ಇದೆ. ತುಂಬಾ ಚೆನ್ನಾಗಿದೆ ಅಂತ ದೊಡ್ಡವ್ರು ಹೇಳವ್ರೆ.
**ಗುಂಡ:** ಯಾವ್ದಮ್ಮ ಅದು?
**ಗುಂಡಿ:** ಹಳೆದಲ್ವಾ ನಂಗೂ ಮರೆತೋಗಿದೆ ಕಣೊ!

***

**ಮಗ:** ಅಮ್ಮ ಒಂದ್ ದಿನದ ಮಟ್ಟಿಗೆ ನಿಂಗೆ ಮುಖ್ಯಮಂತ್ರಿ ಆಗೋ ಚಾನ್ಸ್ ಏನಾದ್ರೂ ಕೊಟ್ರೆ ಏನೇನ್ ಮಾಡ್ತಿಯ?
**ಅಮ್ಮ:** ನಮ್ ಇಡೀ ಕರ್ನಾಟಕದ ಜನ ರಾಗಿ ಮುದ್ದೆ ಬಸ್ಸಾರ್ ತಿನ್ಬೇಕು ಅಂತ ಆರ್ಡರ್ ಮಾಡ್ಬುಡ್ತೀನಿ!

***

**ಗುಂಡಿ:** ನಾನೇನಾದ್ರೂ ದಪ್ಪ ಆಗಿದ್ದೀನಾ?
**ಗುಂಡ:** ಹು ಕಣಮ್ಮ, ಈ ನಡುವೆ ಸ್ವಲ್ಪ ದಪ್ಪ ಆಗಿದ್ದೀಯ.
**ಗುಂಡಿ:** ನಾನೇನ್ ನಿಮ್ ಅಪ್ಪನ ಮನೆದ್ ತಿಂದ್ ದಪ್ಪ ಆಗಿಲ್ಲ ಹೋಗೊಲೇ.

***

**ಅಮ್ಮ:** ನಾನ್ ಜಾಬ್ ಮಾಡೋಣ ಅಂತಿದ್ದಿನೊ.
**ಮಗ:** ಓದಿರೋದ್ ಮೂರನೇ ಕ್ಲಾಸು. ಏನ್ ಜಾಬ್ ದಬ್ಬಾಕ್ತೀರೊ?
**ಅಮ್ಮ:** ಎರಡನೇ ಕ್ಲಾಸ್ ಮಕ್ಕಳಿಗೆ ಪಾಠ ಹೇಳ್ ಕೊಡ್ತೀನಿ!

ರೀಲ್ಸ್ ಸಂಗ್ರಹ: ವಿಜೆ ಮನೋಜ್
(bit.ly/3xnBsX8)

**ತಂದೆ:** ನನ್ನ ಮಗ ಮನೆಯಲ್ಲಿ ನಾನು ಹಾಕಿದ ಗೆರೆಯನ್ನು ದಾಟಲ್ಲ. ಅಷ್ಟು ಭಯ ಸರ್!
**ಶಿಕ್ಷಕರು:** ಹೌದೇನೊ! ಏನ್ ಯೋಚಿಸ್ತಿದ್ದಿಯಾ?
**ಗುಂಡ:** ಗೆರೆ ಎಲ್ಲಿ ಹಾಕಿರಬಹುದು ಅಂತ ಸರ್!

***

**ಗುಂಡ:** ನಿಂಗೊಂದು ವಿಷ್ಯ ಗೊತ್ತಾ?
**ಪುಂಡ:** ಇಲ್ಲ! ಏನ್ ವಿಷ್ಯ?
**ಗುಂಡ:** ‘ಕಿಟ್ಟ’ ಲಾಕ್ ಡೌನ್ ಟೈಮ್‌ನಲ್ಲಿ ಸಾಲ ತಗೊಂಡವನ ಹೆಸರನ್ನೇ ಮರೆತಿದ್ದಾನೆ ಕಣೋ!
**ಪುಂಡ:** ಹೌದಾ. ನಿಂಗೆನಾದ್ರೂ ಗೊತ್ತಿದ್ದರೆ ಹೇಳ್ಬೇಕಿತ್ತು.
**ಗುಂಡ:** ಹೋಗೊಲೆ, ನಾನ್ಯಾಕೆ ಹೇಳಲಿ? ಸಾಲ ತಗೊಂಡವ್ನೇ ನಾನು!

***

**ಬ್ರೋಕರ್:** ಒಳ್ಳೆಯ ಬಾಡಿಗೆ ಮನೆ ಇದೆ ಸರ್!
**ಗುಂಡ:** ಏನು ವಿಶೇಷ?
**ಬ್ರೋಕರ್:** ಎಲ್ಲಾ ಕೋಣೆಯಲ್ಲಿ ಎರಡೆರಡು ಮೊಬೈಲ್ ಚಾರ್ಜರ್ ಪ್ಲಗ್ ಪಾಯಿಂಟ್ ಇದೆ!

***

**ಪಿ.ಎ.:** ಸಾಹೇಬ್ರ ಭೇಟಿಗೆ ಸಂಜೆವರೆಗೂ ಕಾಯ್ತಿನಿ ಅಂತಿಯಲ್ಲ! ಬೇಜಾರಾಗಲ್ವಾ?
**ಗುಂಡ:** ಇಲ್ಲ ಅಣ್ಣ! ಕೊರೊನಾದಿಂದಾಗಿ ರೇಷನ್ ಅಂಗಡಿ, ಸಾರಾಯಿ ಅಂಗಡಿ, ಆಸ್ಪತ್ರೆಯ ಮುಂದೆಲ್ಲಾ ದಿನಗಟ್ಟಲೆ ಕಾದು ಕಾದು ಅಭ್ಯಾಸ ಆಗ್ಬಿಟ್ಟಿದೆ!

***

**ಅರ್ಚಿತ್:** ಪರೀಕ್ಷೆಲಿ ಫೇಲ್ ಆಗಿದ್ದಕ್ಕೆ ತುಂಬಾ ಬೇಜಾರಲ್ಲಿದ್ದೀಯಲ್ಲ?
**ಗುಂಡ:** ಲಾಕ್ ಡೌನ್ ಟೈಮ್‌ನಲ್ಲಿ ಗುರುಗಳಿಗೆ ದಿನಾ ಕಾಲ್ ಮಾಡಿ ಯೋಗಕ್ಷೇಮ ವಿಚಾರಿಸ್ತಿದ್ದೆ. ಆದರೂ ಫೇಲ್ ಮಾಡಿದ್ರಲ್ಲ ಅಂತ ಬೇಜಾರಾಗ್ತಿದೆ ಕಣೋ!

***

**ಹೆಂಡತಿ:** ಏನು? ಇಷ್ಟು ಬೇಗ ಆಫೀಸಿಂದ ಮನೆಗೆ ಬಂದಿದ್ದೀರಲ್ಲ?
**ಗಂಡ:** ಕಚೇರಿಯಲ್ಲಿ ತಪ್ಪು ಮಾಡಿದ್ದಕ್ಕೆ ನರಕಕ್ಕೆ ಹೋಗು ಅಂತ ಬಾಸ್ ಬೈದ್ರು. ಅದ್ಕೆ ಬಂದೆ!

***

**ಡಾಕ್ಟರ್:** ನಿಮ್ಮ ಗಾಯಕ್ಕೆ ಹೊಲಿಗೆ ಹಾಕಬೇಕು!
**ರೋಗಿ:** ಹೊಲಿಗೆ ಯಂತ್ರ ಮನೆಯಿಂದ ತಂದ್ರೆ ಬಿಲ್ ಕಡಿಮೆ ಮಾಡ್ತಿರಾ ಸರ್?

***

**ಅರ್ಚಿತ್:** ಯಾಕೋ ಗುಂಡ ನಿನ್ನೆ ರಜೆ ಹಾಕಿದ್ದಿಯಲ್ಲ?
**ಗುಂಡ:** ಹೋಮ್ ಮಿನಿಸ್ಟರ್ ಆರ್ಡರ್ ಸರ್!
**ಅರ್ಚಿತ್:** ಹೌದಾ. ನಂಗೊತ್ತೆ ಇಲ್ವಲ್ಲೊ. ಅವ್ರು ಏನ್ ಆರ್ಡರ್ ಮಾಡಿದ್ರೊ?
**ಗುಂಡ:** ಸರ್, ಹೋಮ್ ಮಿನಿಸ್ಟರ್ ಅಂದ್ರೆ ನನ್ನ ಹೆಂಡತಿ. ಸರ್ಕಾರದ ಹೋಮ್ ಮಿನಿಸ್ಟರ್ ಅಲ್ಲ.

***

**ಗುಂಡ:** ನಿಮ್ಮಿಬ್ಬರ ಪ್ರೀತಿ ಹೇಗೆ ಆಯ್ತು?
**ಪ್ರೇಮಿಗಳು:** ಆನ್‌ಲೈನ್ ಕ್ಲಾಸ್‌ಗೆ ಮನೆಯಲ್ಲಿ ನೆಟ್ವರ್ಕ್ ಸಿಗದೆ, ಸಿಗೋ ಜಾಗಕ್ಕೆ ಹುಡುಕಿಕೊಂಡು ಹೋದಾಗ ಪರಿಚಯವಾಗಿ ಪ್ರೀತಿ ಬೆಳೆತು!

***

**ಪಾರಕ್ಕ:** ಏನು ಮಗನಿಗೆ ಮಾಸ್ಕೇಶ ಅಂತ ಹೆಸರು ಇಟ್ಟಿದ್ದೀರಲ್ಲಾ.
**ಸುಬ್ಬಕ್ಕ:** ಕೊರೊನಾ ಹೀಗೆ ಇದ್ದರೆ ಮಾಸ್ಕ್ ಹಾಕಲು ಯಾವಾಗಲೂ ನೆನಪಿರಲಿ ಅಂತ!

ಸಂಗ್ರಹ: ರಾಜೇಶ ನಾಯ್ಕ,
ಅಂಕೋಲಾ